ರವರೇ, ತಮಗೆ ಇವತ್ತು ಗೃಹಸಚಿವರಿಂದ ಉತ್ತರವನ್ನು ತರಿಸಿಕೊಡುತ್ತೇನೆ. ಇದು ನನ್ನ ಜವಾಬ್ದಾರಿ. ಶ್ರೀ ಕಾರಜೋಳ ಅವರೇ, ನೀವು ನೋಟೀಸ್ ಕೊಟ್ಟಿರುವ ಕೋರ್ಟ್ ವಿಚಾರ ಆ ಮೇಲೆ ಚರ್ಚೆಗೆ ತೆಗೆದುಕೊಳ್ಳೋಣ. ದಯಮಾಡಿ ಸಹಕರಿಸಿ. ಗುರುಪಾದಪ್ಪನವರೇ, ನಿಮ್ಮ ಫೆಡರೇಷನ್ ಗಲಾಟೆ ಬಗ್ಗೆ ಶ್ರೀನಿವಾಸ ಗೌಡರಿಗೆ ಹೇಳಿದ್ದೇನೆ. ಅವರು ಊಟಕ್ಕೆ ಹೋಗಿದ್ದಾರೆ. ಅವರು ಸದನಕ್ಕೆ ಬಂದಮೇಲೆ ಚರ್ಚೆಗೆ ಅವಕಾಶ ಕೊಡುತ್ತೇನೆ.

ಶ್ರೀ. ಕೆ. ಎಸ್. ಪುಟ್ಟಣ್ಣಯ್ಯ : ಹತ್ತಿ ಬೀಜದ ವಿಷಯವಾಗಿ ಬಹಳಷ್ಟು ಗಲಾಟೆ ಆಗಿದೆ. ಆದ್ದರಿಂದ ಇದಕ್ಕೆ ಅವಕಾಶ ಕೊಟ್ಟರೆ ಒಳ್ಳೆಯದು.

ಶ್ರೀ. ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೆ, ಹತ್ತಿ ಬೀಜದ ಬಗ್ಗೆ ಮಾನ್ಯ ಸದಸ್ಯರುಗಳು ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ಎರಡು ನಿಮಿಷದಲ್ಲಿ ನಾನು ಉತ್ತರ ಹೇಳಿಬಿಡುತ್ತೇನೆ.

ಅಧ್ಯಕ್ಷರು : ಬೇಡ, that will set a new precedent, Because Other business is waiting for me. I have to take up the other business. Kindly cooperate.

ಶ್ರೀ. ಮಲ್ಲಿಕಾರ್ಜುನ ಖರ್ಗೆ : ಹತ್ತಿಬೀಜದ ವಿಷಯವಾಗಿ ಮಾನ್ಯ ಮಂತ್ರಿಗಳು ಪ್ರಸ್ತಾಪ ಮಾಡಿದ್ದಾರೆ ಮತ್ತು ಇದರ ಬಗ್ಗೆ ಮಾತನಾಡುವುದಕ್ಕೆ ಅನೇಕ ಸದಸ್ಯರೂ ಕೂಡ ಕಾದು ಕುಳಿತಿದ್ದಾರೆ. ಆದ್ದರಿಂದ ಇದರ ಬಗ್ಗೆ ಎಲಾಬರೇಟ್ ಸ್ಟೇಟ್‌ಮೆಂಟ್ ಮಾಡಿದರೆ ಒಳ್ಳೆಯದು.

ಶ್ರೀ. ಸಿ. ಬೈರೇಗೌಡ : ಸ್ಟೇಟ್‌ಮೆಂಟ್‌ಗಿಂತ, ಆ ರೀತಿ ಹೇಳಿಕೆ ನೀಡಿದರೆ ಅದರ ಪರಿಣಾಮ ಏನಾಗುತ್ತದೆ ಎನ್ನುವುದನ್ನು ಹೇಳುತ್ತೇನೆ. ಅದರಲ್ಲಿ ಯಾರ್ಯಾರಿಗೆ ಶ್ರದ್ಧೆ ಇದೆ ಅವರನ್ನೆಲ್ಲಾ ಕರೆದು ಮಾತನಾಡುವುದಕ್ಕೆ ನಾನು ಸಿದ್ದನಿದ್ದೇನೆ. ಅದರಲ್ಲಿ ಕೆಲವು ವಿಚಾರಗಳನ್ನೆಲ್ಲಾ ಬಹಿರಂಗವಾಗಿ ಹೇಳಿದರೆ ಪ್ರತಿಕೂಲವಾದಂಥ ಪರಿಣಾಮ ಬೀರುವ ಪರಿಸ್ಥಿತಿ ಇದೆ. ನಿಮ್ಮನ್ನೆಲ್ಲಾ ಕರೆದು ಮಾತನಾಡಿ ಅದರಲ್ಲಿ ವಾಸ್ತವಾಂಶ ಏನು ಇದೆ ಅದನ್ನು ನಿಮಗೆ ವಿವರಿಸುತ್ತೇನೆ.

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್ ಅವರೇ, ಹತ್ತಿ ಬೀಜದ ವಿಚಾರವಾಗಿ ಆ ಮೇಲೆ ಪ್ರತ್ಯೇಕವಾಗಿ ಚರ್ಚೆಗೆ ತೆಗೆದುಕೊಳ್ಳುತ್ತಿದ್ದೇವೆ. ಚರ್ಚೆಗೆ ತೆಗೆದುಕೊಂಡು ಅದಕ್ಕೆ ಸಮರ್ಪಕವಾಗಿ ಉತ್ತರವನ್ನು ಸಂಬಂಧಪಟ್ಟವರಿಂದ ಕೊಡಿಸಿಕೊಡುತ್ತೇವೆ. ತಾವು ದಯಮಾಡಿ ತಮ್ಮ ಸ್ಥಾನಕ್ಕೆ ಹೋಗಿ ಕುಳಿತುಕೊಳ್ಳಿ.

(ಈ ಹಂತದಲ್ಲಿ ಶ್ರೀ. ವಾಟಾಳ್ ನಾಗರಾಜ್ ಅವರು ತಮ್ಮ ಸ್ಥಾನಕ್ಕೆ ಹಿಂತಿರುಗಿದರು)

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಅಧ್ಯಕ್ಷರೆ, ಎಂಡೋಮೆಂಟ್ ಬಿಲ್ ಬಗ್ಗೆ ಜಂಟಿ ಸದನ ಸಮಿತಿ ಮಾಡಿ, ನಂತರ ಅದು ಸರ್ಕಾರಕ್ಕೆ ವರದಿಯನ್ನು ಕೊಟ್ಟಿದೆ. ಆ ಸಮಿತಿಯಲ್ಲಿ ನಾವೆಲ್ಲಾ ಇದ್ದೆವು. ಕಾರಣಾಂತರದಿಂದ ಅದನ್ನು ಸದನದ ಮುಂದೆ ತಂದಿರಲಿಲ್ಲ. ಈ ಸಲ ಸರ್ಕಾರ ತರುತ್ತದೆಂದು ನಂಬಿದ್ದೆವು.

MR. SPEAKER : It is a relevant issue, ಪಾರ್ಲಿಮೆಂಟರಿ ಅಫೇರ್ಸ್ ಮಿನಿಸ್ಟರ್ ಇಲ್ಲಿ ಇಲ್ಲ, ಅವರು ಮೇಲ್ಮನೆ ಸದನಕ್ಕೆ ಹೋಗಿದ್ದಾರೆ. ಅವರು ಈ ಸದನದಲ್ಲಿ ಇದ್ದಾಗ ತಾವು

ಮೆನ್‌ಷನ್ ಮಾಡಿ. ಅವರು ಈಗ ಬಿ. ಎ. ಸಿ. ಮೀಟಿಂಗ್‌ಗೆ ಕೂಡ ಬರುತ್ತಾರೆ. I will advice him to bring that matter before this Session.

ಶ್ರೀ. ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ನಾನು ಬಹಳ ಪ್ರಮುಖವಾದ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಹೆಗ್ಗಡದೇವನ ಕೋಟೆಯಲ್ಲಿ ಹತ್ತಿಬೀಜ ರೈತರಿಗೆ ದೊರಕದೆ ರೈತರ ಧಾಳಿಯಾಗಿದೆ, ರೈತರ ಮೇಲೆ ಪೊಲೀಸರು ಗಲಾಟೆ ಮಾಡಿದ್ದಾರೆ. ಅಲ್ಲಿ ಪ್ರಕ್ಷುಬ್ಧ ವಾತಾವರಣ ನಿರ್ಮಾಣವಾಗಿದೆ.

ಅಧ್ಯಕ್ಷರು : ಅಲ್ಲಿಯ ಕ್ಷೇತ್ರದ ಶಾಸಕರಾದಂಥ ಶ್ರೀಮಾನ್ ನಾಗರಾಜ್ ಅವರು ಬಂದು ಬೆಳಿಗ್ಗೆ ನನಗೆ ಹೇಳಿದ್ದಾರೆ. ಖಂಡಿತವಾಗಿ ಈ ವಿಚಾರವನ್ನು ಚರ್ಚೆಗೆ ತೆಗೆದುಕೊಳ್ಳೋಣ. ಅವರು ಆ ಕ್ಷೇತ್ರದ ಪ್ರತಿನಿಧಿಯಾಗಿರುವುದರಿಂದ ಅವರಿಗೆ ಒಂದು ಅವಕಾಶ ಕೊಟ್ಟ ನಂತರ ತಮಗೆಲ್ಲಾ ಅವಕಾಶ ಕೊಡುತ್ತೇನೆ. ಆ ಮೇಲೆ ಈ ವಿಚಾರವನ್ನು ತೆಗೆದುಕೊಳ್ಳೋಣ.

ಶ್ರೀ. ವಾಟಾಳ್ ನಾಗರಾಜ್ : ಆಯಿತು ಸಂತೋಷ. ಏಕೆಂದರೆ ಹತ್ತಿಬೀಜದ ಬೆಲೆ ಕಡಿಮೆ ಆಗಲೇ ಬೇಕು. ಶ್ರೀ. ನಾಗರಾಜ್ ಅವರು ಮಾತನಾಡಲಿ. ನಮ್ಮದೇನೂ ಅಭ್ಯಂತರ ಇಲ್ಲ.

9 ಶಾಸನ ರಚನೆ

(ಅ) ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕ 1998

ಪರ್ಯಾಲೋಚನಾ ಪ್ರಸ್ತಾವ

ಶ್ರೀ. ಎಂ. ಎಸ್. ಪಾಟೀಲ್ (ನಗರಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೆ, 1998ರ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವ ಮಂಡಿಸಲ್ಪಟ್ಟಿತು

ಶ್ರೀ ಎಂ. ಎಸ್. ಪಾಟೀಲ್ (ನಗರಾಭಿವೃದ್ಧಿ ಸಚಿವರು) : ಇದು ಅತ್ಯಂತ ಸರಳವಾದ ತಿದ್ದುಪಡಿ ಮತ್ತು ಅಷ್ಟೇ ಮಹತ್ತರ. ಈ ತಿದ್ದುಪಡಿಯನ್ನು ಸದನದ ಮುಂದೆ ತರಲು ಇಚ್ಛಿಪಡುತ್ತಿದ್ದೇನೆ. ಮೊದಲನೆಯದಾಗಿ, ಮಂಡಲ ಪಂಚಾಯಿತಿ ಎಂಬುದನ್ನು ಗ್ರಾಮ ಪಂಚಾಯಿತಿ ಎಂದು ಮಾಡುವುದು. ಇದೇನೂ ಅಷ್ಟು ಮಹತ್ವದ್ದಲ್ಲ. ಅದನ್ನು ಒಪ್ಪಬಹುದೆಂದು ಕೇಳುತ್ತೇನೆ. ಇನ್ನೊಂದು, ಕರ್ನಾಟಕದ ಎಲ್ಲಾ ಪಟ್ಟಣ ಪ್ರದೇಶಗಳಲ್ಲಿ ರಸ್ತೆಯ ಅಗಲೀಕರಣ ಮಾಡುತ್ತಿರುವುದು ಎಲ್ಲರಿಗೂ ಗೊತ್ತಿದೆ. ಯಾವ ಮನೆಯ ಮಾಲೀಕ ಭೂಮಿಯನ್ನು ಕಳೆದುಕೊಳ್ಳುತ್ತಾನೋ, ಅವನಿಗೆ ಅದೇ ಜಾಗದಲ್ಲಿ ಮನೆ ಕಟ್ಟಿಕೊಳ್ಳಲು ವ್ಯವಸ್ಥೆ ಮಾಡುವುದು. ಒಂದು ವೇಳೆ ಅವನಿಗೆ ಅನುಕೂಲವಾಗಲಿಲ್ಲವಾದರೆ, ಬೇರೆ ಯಾವುದಾದರೂ ಪ್ರದೇಶ ಅಥವಾ ಅದೇ ಊರಿನಲ್ಲಿ ಸೈಟ್ ಇದ್ದರೆ, ಅನುಕೂಲವಾಗುವ ಕಡೆ ಎಷ್ಟು ಕಳೆದುಕೊಂಡಿರುತ್ತಾನೋ, ಅಷ್ಟನ್ನು ಕಟ್ಟಿಕೊಳ್ಳುವುದಕ್ಕೆ ಅನುಮತಿ ನೀಡುವುದು. ಇನ್ನೊಂದು, ವಿರೋಧ ಪಕ್ಷದ ನಾಯಕರು ಫೈವ್‌ಸ್ಟಾರ್ ಹೋಟೆಲ್ ಬಗ್ಗೆ ತಿಳಿಸಿದರು. ಇದು ಕೇವಲ